# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **827** |
| **ಸದಸ್ಯರ ಹೆಸರು** | : | **ಶ್ರೀ ಡಿ.ಎಸ್. ಅರುಣ್<br>(ಸ್ಥಳೀಯ) ಸಂಸ್ಥೆಗಳ ಕ್ಷೇತ್ರ** |
| **ಉತ್ತರಿಸುವ ದಿನಾಂಕ** | : | **16.12.2024** |
| **ಉತ್ತರಿಸುವವರು** | : | **ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು** |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯ ವನ್ಯಜೀವಿ ಮಂಡಳಿಗೆ ಪ್ರಸಕ್ತ ಸಾಲಿನ ಮಂಡಳಿಯ ಸದಸ್ಯರ ನೇಮಕಾತಿಯಲ್ಲಿ ಅರ್ಹತೆಯ ಮಾನದಂಡಗಳನ್ನು ಗಾಳಿಗೆ ತೂರಿರುವ ಬಗ್ಗೆ ದೂರುಗಳು ಬಂದಿರುವುದು ನಿಜವೇ?</td><td>ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972ರ ಸೆಕ್ಷನ್6(1) ರಲ್ಲಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದನ್ವಯ ಅಧಿಸೂಚನೆ ಸಂಖ್ಯೆ: ಅಪಜೀ 116 ಎಫ್.ಡಬ್ಲ್ಯೂಎಲ್ 2020, ದಿನಾಂಕ: 26.07.2024 ರಲ್ಲಿ ರಾಜ್ಯ ವನ್ಯಜೀವಿ ಮಂಡಳಿಯನ್ನು ರಚಿಸಿ ಅಧಿಸೂಚನೆ ಹೊರಡಿಸಲಾಗಿದೆ.<br><br>ಸದರಿ ಅಧಿಸೂಚನೆಯ ಕುರಿತು ಯಾವುದೇ ಆಕ್ಷೇಪಣೆಯು ಈ ಕಚೇರಿಯಲ್ಲಿ ಸ್ವೀಕೃತಗೊಂಡಿರುವುದಿಲ್ಲ.</td></tr>
<tr><td>ಆ)</td><td>ನೇಮಕಾತಿ ಮಾಡಲು ನಿಗದಿಪಡಿಸಿರುವ ಮಾನದಂಡಗಳೇನು; ಮತ್ತು ಈಗ ನೇಮಕಗೊಂಡಿರುವ ಸದಸ್ಯರುಗಳ ಅನುಭವಗಳು ಹಾಗೂ ಅವರ ಅರ್ಹತೆಗಳ ಬಗ್ಗೆ ವಿವರವನ್ನು ಒದಗಿಸುವುದು;</td><td rowspan="2">ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರ ಸೆಕ್ಷನ್ 6 (1) (ಎ) ರಿಂದ (ಆರ್) ರವರೆಗೆ ಪ್ರಸ್ತಾಪಿಸಿರುವಂತೆ ರಾಜ್ಯ ವನ್ಯಜೀವಿ ಮಂಡಳಿಗೆ ಸದಸ್ಯರನ್ನು ನೇಮಿಸಲಾಗಿರುತ್ತದೆ.<br><br>(ರಾಜ್ಯ ವನ್ಯಜೀವಿ ಮಂಡಳಿಯ ಅಧಿಸೂಚನೆ ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆ, ಸೆಕ್ಷನ್ 6 ರ ಪ್ರತಿಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ).</td></tr>
<tr><td>ಇ)</td><td>ಅನರ್ಹ ಸದಸ್ಯರ ನೇಮಕವಾಗಿದ್ದಲ್ಲಿ, ಕೂಡಲೇ ಮಂಡಳಿಯನ್ನು ವಿಸರ್ಜಿಸಿ ಹೊಸ ಮಂಡಳಿಯನ್ನು ರಚಿಸಲು ಕ್ರಮ ವಹಿಸಲಾಗಿದೆಯೇ; ವಹಿಸಲಾಗುವುದೇ?</td></tr>
</table>

**ಸಂಖ್ಯೆ: ಅಪಜೀ 174 ಎಫ್‌ಡಬ್ಲ್ಯೂಎಲ್ 2024**

**(ಈಶ್ವರ ಬಿ.ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

ಅನುಬಂಧ LCUQ: 827

**ಕರ್ನಾಟಕ ಸರ್ಕಾರ**

ಇ-ಸಂಖ್ಯೆ: ಅಪಜೀ 116 ಎಫ್‌ಡಬ್ಲ್ಯೂಎಲ್ 2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು ದಿನಾಂಕ: 26-07-2024.

**ಅಧಿಸೂಚನೆ**

ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, 1972ರ ಸೆಕ್ಷನ್ 6(1) ರಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿಯನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಮೂರು ವರ್ಷಗಳ ಅವಧಿಗೆ ಈ ಕೆಳಕಂಡಂತೆ ಪುನರ್ ರಚಿಸಲಾಗಿದೆ.

| | | |
|---|---|---|
| 1. | **ಸನ್ಮಾನ್ಯ ಮುಖ್ಯಮಂತ್ರಿಗಳು** | **ಅಧ್ಯಕ್ಷರು** |
| 2. | **ಸನ್ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು** | **ಉಪಾಧ್ಯಕ್ಷರು** |
| 3. | **ರಾಜ್ಯ ವಿಧಾನ ಮಂಡಲ ಸದಸ್ಯರು:** | |
| | 1. ಶ್ರೀ ಅಶೋಕ ಮ.ಪಟ್ಟಣ (ಪಿ.ಎಂ. ಅಶೋಕ),<br>ಮಾನ್ಯ ಶಾಸಕರು, ರಾಮದುರ್ಗ ವಿಧಾನಸಭಾ ಕ್ಷೇತ್ರ, ಬೆಳಗಾವಿ ಜಿಲ್ಲೆ, ಹಾಗೂ ಸರ್ಕಾರಿ ಮುಖ್ಯ ಸಚೇತಕರು, ಕರ್ನಾಟಕ ವಿಧಾನಸಭೆ | ಸದಸ್ಯರು |
| | 2. ಶ್ರೀ ಹೆಚ್. ಎಂ. ಗಣೇಶ ಪ್ರಸಾದ್<br>ಮಾನ್ಯ ಶಾಸಕರು, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ,<br>ಚಾಮರಾಜನಗರ ಜಿಲ್ಲೆ | |
| | 3. ಶ್ರೀ ಪುಟ್ಟಣ್ಣ,<br>ಮಾನ್ಯ ವಿಧಾನ ಪರಿಷತ್ ಸದಸ್ಯರು,<br>ಬೆಂಗಳೂರು ಕೇಂದ್ರ ಶಿಕ್ಷಕರ ಕ್ಷೇತ್ರ | |
| 4. | **ವನ್ಯಜೀವಿ ಬಗ್ಗೆ ಕೆಲಸ ಮಾಡುವ ಸರ್ಕಾರೇತರ ಸಂಸ್ಥೆಗಳ ಮುಖ್ಯಸ್ಥರು:** | |
| | 1. ಶ್ರೀ ಸುಶೀಲ್ ಗ್ಯಾನ್‌ಚಂದ್,<br>ವೈಲ್ಡ್‌ಲೈಫ್ ಅಸೋಸಿಯೇಷನ್ ಆಫ್ ಸೌತ್ ಇಂಡಿಯಾ,<br>ನಂ. 19, ವಿಕ್ಟೋರಿಯಾ ರಸ್ತೆ, ಬೆಂಗಳೂರು –560 047. | ಸದಸ್ಯರು |
| | 2. ಶ್ರೀಮತಿ ಸೀಮಾ ಬೇಗಂ ಖಲೀಲ್<br>ಟೈಗರ್ಸ್ ಅನ್‌ಲಿಮಿಟೆಡ್ ವೈಲ್ಡ್‌ಲೈಫ್ ಸೊಸೈಟಿ<br>ನಂ. 44/2, 2ನೇ ಕ್ರಾಸ್, ಮಿಲ್ಲರ್ ರಸ್ತೆ, ಬೆನ್ಸನ್ ಟೌನ್,<br>ಬೆಂಗಳೂರು –560 046. | |
| | 3. ಡಾ|| ದಿನೇಶ್ ಆರ್.ವಿ<br>ಬೆಂಗಳೂರು ಎನ್ವಿರಾನ್‌ಮೆಂಟಲ್ ಟ್ರಸ್ಟ್,<br>ನಂ.10, ಶಿರುರ ಪಾರ್ಕ್F, ಬಿ ಸ್ಟ್ರೀಟ್, ಶೇಷಾದ್ರಿಪುರಂ,<br>ಬೆಂಗಳೂರು- 560 020. | |
| 5. | **ಸಂರಕ್ಷಣಾ ವಿಶೇಷ ತಜ್ಞರು, ಜೀವಿಶಾಸ್ತ್ರಜ್ಞರು ಹಾಗೂ ಪರಿಸರವಾದಿಗಳು:** | |
| | 1. ಶ್ರೀ ರವೀಂದ್ರ ರಘುನಾಥ್ ಬಿನ್ ರಘುನಾಥ್ ಹೆಚ್,<br>(ಪರಿಶಿಷ್ಟ ಪಂಗಡದ ಕೋಟಾ)<br>ನಂ. 27, 4ನೇ ಮುಖ್ಯ ರಸ್ತೆ, ಎ.ಎಂ.ಜೆ.ಬಡಾವಣೆ,<br>ಸಂಜಯನಗರ, ಬೆಂಗಳೂರು. | ಸದಸ್ಯರು |



20/7/24

| | | |
|---|---|---|
| | 2. ಶ್ರೀ ಚಿಕ್ಕಣ್ಣ ಬಿನ್ ಸಣ್ಣದೇವಯ್ಯ,<br>(ಪರಿಶಿಷ್ಟ ಪಂಗಡದ ಕೋಟಾ)<br>ಕಸಬಾ ಹೋಬಳಿ, ಹೆಗ್ಗಡದೇವನ ಕೋಟೆ ತಾಲ್ಲೂಕು,<br>ವಡ್ಡರಗುಡಿ ಹಾಡಿ ಗ್ರಾಮ, ಮೈಸೂರು. | |
| | 3. ಡಾ\|\| ರಾಜ್‌ಕುಮಾರ್ ಎಸ್. ಅಲ್ಲೆ,<br>ನಂ. 549, 12ನೇ ತಿರುವು, ಐಡಿಯಲ್ ಹೋಮ್ಸ್,<br>ರಾಜರಾಜೇಶ್ವರಿ ನಗರ, ಬೆಂಗಳೂರು -560 098. | |
| | 4. ಶ್ರೀ ಸಂಕೇತ್ ಪೂವಯ್ಯ ಬಿನ್ ಎಂ.ಕೆ.ಪೂವಯ್ಯ,<br>ವಿರಾಜಪೇಟೆ, ಕೊಡಗು ಜಿಲ್ಲೆ. | |
| | 5. ಕು\|\|ವೈಶಾಲಿ ಕುಲಕರ್ಣಿ,<br>ಫ್ಲ್ಯಾಟ್ ನಂ.104, ಶಿವಗಿರಿ, ಬರಕೊಟ್ರಿ<br>ಕೆ.ಯು.ಡಿ ರಸ್ತೆ, ಧಾರವಾಡ –580 007. | |
| | 6. ಶ್ರೀ ಅಜಿತ್ ಕರಿಗುಡ್ಡಯ್ಯ,<br>ನಂ.401, ವರುಣ್ ಅಪಾರ್ಟ್‌ಮೆಂಟ್ ಕೃಷ್ಣ ಲೇಔಟ್,<br>ಆರ್.ಎಂ.ವಿ 2ನೇ ಹಂತ, ಬೆಂಗಳೂರು. | ಸದಸ್ಯರು |
| | 7. ಶ್ರೀ ವಿನಯ್ ಕುಮಾರ ಮಾಳಿಗೆ<br>ನಂ. 16-1-124, ಸಂಬೋಧಿ ನಿಲಯ,<br>ಅಲ್ಲಮಪ್ರಭು ನಗರ, ಗುಂ<br>ಪಾ ಹಿಂಬದಿ ಮನ್ನಳ್ಳಿ ರಸ್ತೆ, ಬೀದರ್ –585 401. | |
| | 8. ಡಾ\|\| ಸಂತೃಪ್ತ್,<br>ಗೋಪಾಲಗೌಡ ಮೆಮೋರಿಯಲ್ ಆಸ್ಪತ್ರೆ,<br>ಮಲೈಮಹದೇಶ್ವರ ರೋಡ್,<br>ನಝರ್‌ಬಾದ್, ಮೈಸೂರು-570 010. | |
| | 9. ಶ್ರೀ ಧ್ರುವ್ ಎಂ. ಪಾಟೀಲ್<br>ನಂ,2, 'ನಂದನವನ", 4ನೇ ಮುಖ್ಯರಸ್ತೆ,<br>ಸದಾಶಿವನಗರ, ಬೆಂಗಳೂರು. | |
| | 10. ಶ್ರೀ ಮಲ್ಲಪ್ಪ ಎಸ್. ಅಂಗಡಿ ಬಿನ್ ಸಿದ್ದಲಿಂಗಪ್ಪ,<br>ನಂ.107, ಸರ್ಪೆಂಟೈನ್ ರಸ್ತೆ,<br>ಕುಮಾರ ಪಾರ್ಕ್ ಪಶ್ಚಿಮ,<br>ಶೇಷಾದ್ರಿಪುರಂ, ಬೆಂಗಳೂರು -560 020. | |
| 6. | **ಪದನಿಮಿತ್ತ ಅಧಿಕಾರಿ ಸದಸ್ಯರು [Ex-officio]** | |
| | 1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬೆಂಗಳೂರು. | |
| | 2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಪರಿಶಿಷ್ಟ ವರ್ಗದ ಕಲ್ಯಾಣ ಇಲಾಖೆ, ಬೆಂಗಳೂರು. | ಸದಸ್ಯರು |
| | 3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, ಬೆಂಗಳೂರು. | |

| | | |
|---|---|---|
| | 4. ವ್ಯವಸ್ಥಾಪಕ ನಿರ್ದೇಶಕರು, ಅರಣ್ಯ, ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ (ನಿ.), ಬೆಂಗಳೂರು. | |
| | 5. ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಫಾರೆಸ್ಟ್ ಸೆಲ್, ಬೆಂಗಳೂರು. | |
| | 6. ಕೇಂದ್ರ ಸರ್ಕಾರದ ಸಶಸ್ತ್ರ ಪಡೆಯ ಓರ್ವ ಪ್ರತಿನಿಧಿ (ಬ್ರಿಗೇಡಿಯರ್ ರ‍್ಯಾಂಕ್‌ಗಿಂತ ಮೇಲ್ಪಟ್ಟು) | |
| | 7. ನಿರ್ದೇಶಕರು, ಪಶುಸಂಗೋಪನೆ ಹಾಗೂ ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು. | |
| | 8. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಬೆಂಗಳೂರು. | ಸದಸ್ಯರು |
| | 9. ನಿರ್ದೇಶಕರು, ವನ್ಯಜೀವಿ ಸಂರಕ್ಷಣೆ, ನವದೆಹಲಿ ಇವರಿಂದ ನಾಮ ನಿರ್ದೇಶನ ಹೊಂದಿದ ಅಧಿಕಾರಿ. | |
| | 10. ನಿರ್ದೇಶಕರು, ಭಾರತೀಯ ವನ್ಯಜೀವಿ ಸಂಸ್ಥೆ, ಡೆಹರಾಡೂನ್ ಇವರಿಂದ ನಾಮ ನಿರ್ದೇಶನ ಹೊಂದಿದ ಅಧಿಕಾರಿ. | |
| | 11. ನಿರ್ದೇಶಕರು, ಜುವಾಲಾಜಿಕಲ್ ಸರ್ವೆ ಆಫ್ ಇಂಡಿಯಾ, ಕೋಲ್ಕತ್ತಾ, ಇವರಿಂದ ನಾಮ ನಿರ್ದೇಶನ ಹೊಂದಿದ ಅಧಿಕಾರಿ. | |
| | 12. ನಿರ್ದೇಶಕರು, ಬಟಾನಿಕಲ್ ಸರ್ವೆ ಆಫ್ ಇಂಡಿಯಾ, ಕೋಲ್ಕತ್ತಾ ಇವರಿಂದ ನಾಮ ನಿರ್ದೇಶನ ಹೊಂದಿದ ಅಧಿಕಾರಿ. | |
| | 13. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಹಾಗೂ ಮುಖ್ಯ ವನ್ಯಜೀವಿ ಪರಿಪಾಲಕರು, ಅರಣ್ಯ ಭವನ, ಬೆಂಗಳೂರು. | ಸದಸ್ಯ ಕಾರ್ಯದರ್ಶಿ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Manjula 20/7/24

(ಜಿ. ಮಂಜುಳ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ,
(ಅರಣ್ಯ-ಎ)

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಬೆಂಗಳೂರು ಇವರಿಗೆ ಈ ಅಧಿಸೂಚನೆಯನ್ನು ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸುವಂತೆ ಹಾಗೂ 100 ಪ್ರತಿಗಳನ್ನು ಅರಣ್ಯ ಇಲಾಖೆಗೆ ಹಾಗೂ 100 ಪ್ರತಿಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಒದಗಿಸುವಂತೆ ಕೋರಿದೆ.

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು (ಜಿ ಮತ್ತು ಎಸ್‌ಎಸ್‌ಎ)/(ಇ ಮತ್ತು ಆರ್‌ಎಸ್‌ಎ)/(ಎ ಮತ್ತು ಇ) ಕರ್ನಾಟಕ, ಬೆಂಗಳೂರು - 560 001.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಪರಿಶಿಷ್ಟ ವರ್ಗದ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಹಾಗೂ ಮುಖ್ಯ ವನ್ಯಜೀವಿ ಪರಿಪಾಲಕರು, ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.
5. ಸಂಬಂಧಿಸಿದ ಎಲ್ಲಾ ಸದಸ್ಯರಿಗೆ – ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಹಾಗೂ ಮುಖ್ಯ ವನ್ಯಜೀವಿ ಪರಿಪಾಲಕರು, ಅರಣ್ಯ ಭವನ, ಬೆಂಗಳೂರು ರವರ ಮುಖಾಂತರ.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

**ಪ್ರತಿಗಳು:-**

1. ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಇವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು – 560 001.
2. ಮಾನ್ಯ ಸಚಿವರು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಇಲಾಖೆ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು – 560 001.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಇಲಾಖೆರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು- 560 001.

ಬಿ. ರಾಷ್ಟ್ರೀಯ ಉದ್ಯಾನಗಳು, ವನ್ಯಜೀವಿಧಾಮಗಳು ಮತ್ತು ಇತರ ಸಂರಕ್ಷಿತ ಪ್ರದೇಶಗಳನ್ನು ಸ್ಥಾಪಿಸಲು ಮತ್ತು ವರ್ಗಿಸಲು ಶಿಫಾರಸ್ಸು ಮತ್ತು ಅಂತಹ ಪ್ರದೇಶಗಳಲ್ಲಿ ಚಟುವಟಿಕೆಗಳನ್ನು ನಿಯಂತ್ರಿಸುವ ವಿಷಯಗಳ ಬಗ್ಗೆ ಶಿಫಾರಸ್ಸುಗಳನ್ನು ಮಾಡುವುದು;

ಸಿ. ವಿವಿಧ ಯೋಜನೆಗಳು ಮತ್ತು ಚಟುವಟಿಕೆಗಳಿಂದ ವನ್ಯಜೀವಿ ಅಥವಾ ಅದರ ಆವಾಸಸ್ಥಾನಗಳ ಮೇಲಿನ ಪರಿಣಾಮಗಳ ಮೌಲ್ಯಮಾಪನ ಮಾಡುವುದು ಅಥವಾ ಮಾಡಿಸಲು ಕಾರಣವಾಗುವುದು;

ಡಿ. ದೇಶದಲ್ಲಿ ವನ್ಯಜೀವಿ ಸಂರಕ್ಷಣೆಯ ಕ್ಷೇತ್ರದ ಪ್ರಗತಿಯನ್ನು ಕಾಲಕಾಲಕ್ಕೆ ಅವಲೋಕಿಸಿ, ಅದರ ಸುಧಾರಣೆಗೆ ಕ್ರಮಗಳನ್ನು ಸೂಚಿಸುವುದು; ಮತ್ತು

ಇ ದೇಶದ ವನ್ಯಜೀವಿಗಳ ಬಗ್ಗೆ ಕೊನೆಪಕ್ಷ ಎರಡು ವರ್ಷಗಳಿಗೊಮ್ಮೆ ಪರಿಸ್ಥಿತಿಯ ವರದಿಯನ್ನು ತಯಾರಿಸಿ, ಪ್ರಕಟಿಸುವುದು.

[1]6. ರಾಜ್ಯ ವನ್ಯಜೀವಿ ಮಂಡಳಿಯ ಸ್ಥಾಪನೆ (Constitution of State Board for Wild Life) 1. ವನ್ಯಜೀವಿ (ಸಂರಕ್ಷಣಾ) (ತಿದ್ದುಪಡಿ) ಕಾಯ್ದೆ, 2002ರನ್ನು ಜಾರಿಗೊಳಿಸಿದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ರಾಜ್ಯ ಸರ್ಕಾರವು ಈ ಕೆಳಕಂಡ ಸದಸ್ಯರನ್ನು ಹೊಂದಿದ ರಾಜ್ಯ ವನ್ಯಜೀವಿ ಮಂಡಳಿಯನ್ನು ರಚಿಸತಕ್ಕದ್ದು;

ಎ. ರಾಜ್ಯದ ಮುಖ್ಯಮಂತ್ರಿ ಮತ್ತು ಕೇಂದ್ರಾಡಳಿತ ಪ್ರದೇಶದ ಸಂದರ್ಭದಲ್ಲಿ, ಮುಖ್ಯಮಂತ್ರಿ ಅಥವಾ ಆಡಳಿತಗಾರರು, ಸಂದರ್ಭಕ್ಕನುಗುಣವಾಗಿ,– ಅಧ್ಯಕ್ಷರು;

ಬಿ. ಅರಣ್ಯ ಮತ್ತು ವನ್ಯಜೀವಿ ಉಸ್ತುವಾರಿಯನ್ನು ಹೊಂದಿದ ಸಚಿವರು – ಉಪಾಧ್ಯಕ್ಷರು;

ಸಿ. ರಾಜ್ಯ ಶಾಸಕಾಂಗದ ಮೂರು ಸದಸ್ಯರು ಅಥವಾ ಶಾಸಕಾಂಗವಿರುವ ಕೇಂದ್ರಾಡಳಿತ ಪ್ರದೇಶದ ಸಂದರ್ಭದಲ್ಲಿ, ಆ ಕೇಂದ್ರಾಡಳಿತ ಪ್ರದೇಶದ ಶಾಸಕಾಂಗ ಮಂಡಳಿಯ ಇಬ್ಬರು ಸದಸ್ಯರು;

ಡಿ. ರಾಜ್ಯ ಸರ್ಕಾರದಿಂದ ನೇಮಿಸಲ್ಪಡುವ, ವನ್ಯಜೀವಿಗಳ ಬಗ್ಗೆ ಕೆಲಸ ಮಾಡುವ ಸರ್ಕಾರೇತರ ಸಂಸ್ಥೆಗಳನ್ನು ಪ್ರತಿನಿಧಿಸುವ ಮೂವರು ಸದಸ್ಯರು;

ಇ. ಪರಿಶಿಷ್ಟ ಬುಡಕಟ್ಟುಗಳ ಕನಿಷ್ಠ ಇಬ್ಬರು ಪ್ರತಿನಿಧಿಗಳನ್ನು ಒಳಗೊಂಡು, ಖ್ಯಾತ ಸಂರಕ್ಷಕರು, ಜೀವಿಪರಿಸ್ಥಿತಿ ತಜ್ಞ ಮತ್ತು ಪರಿಸರವಾದಿಗಳಲ್ಲಿ, ರಾಜ್ಯ ಸರ್ಕಾರದಿಂದ ನೇಮಿತವಾದ ಹತ್ತು ಸದಸ್ಯರು;

ಎಫ್. ಸಂದರ್ಭಕ್ಕನುಗುಣವಾಗಿ, ಅರಣ್ಯ ಮತ್ತು ವನ್ಯಜೀವಿಗಳ ಉಸ್ತುವಾರಿಯನ್ನು ಹೊಂದಿರುವ ರಾಜ್ಯ ಸರ್ಕಾರದ ಕಾರ್ಯದರ್ಶಿಗಳು ಅಥವಾ ಕೇಂದ್ರಾಡಳಿತ ಪ್ರದೇಶದ ಸರ್ಕಾರದ ಕಾರ್ಯದರ್ಶಿಗಳು;

ಜಿ. ರಾಜ್ಯ ಅರಣ್ಯ ಇಲಾಖೆಯ ಉಸ್ತುವಾರಿಯನ್ನು ಹೊಂದಿರುವ ಅಧಿಕಾರಿ;

ಹೆಚ್. ರಾಜ್ಯ ಸರ್ಕಾರದ ಕಾರ್ಯದರ್ಶಿಗಳು, ಬುಡಕಟ್ಟು ಜನಾಂಗ ಕಲ್ಯಾಣ ಇಲಾಖೆ;

ಐ. ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು;

ಜೆ. ಇನ್ಸ್‌ಪೆಕ್ಟರ್ ಜನರಲ್‌ನ (ಮಹಾ ನಿರೀಕ್ಷಕರು) ದರ್ಜೆಗಿಂತ ಕಡಿಮೆ ಇಲ್ಲದ ರಾಜ್ಯ ಪೊಲೀಸ್ ಇಲಾಖೆಯ ಅಧಿಕಾರಿ;

1 2003ರ ಕಾಯ್ದೆ ಸಂ. 16ರನ್ವಯ, 1/4/2003 ರಿಂದ ಜಾರಿಯಾಗುವ ಹಾಗೆ ಕಲಂ 6 ನ್ನು ಬದಲಾಯಿಸಲಾಗಿದೆ

ಕೆ. ಕೇಂದ್ರ ಸರ್ಕಾರದಿಂದ ನೇಮಿಸಲ್ಪಡುವ, ಬ್ರಿಗೇಡಿಯರ್‌ನ ದರ್ಜೆಗಿಂತ ಕಡಿಮೆ ಇಲ್ಲದ, ರಕ್ಷಣಾ ಪಡೆಯ ಒಬ್ಬ ಪ್ರತಿನಿಧಿ;

ಎಲ್. ರಾಜ್ಯದ ಪಶುಸಂಗೋಪನಾ ಇಲಾಖೆಯ ನಿರ್ದೇಶಕರು;

ಎಂ. ರಾಜ್ಯದ ಮೀನುಗಾರಿಕೆ ಇಲಾಖೆಯ ನಿರ್ದೇಶಕರು;

ಎನ್. ವನ್ಯಜೀವಿ ಸಂರಕ್ಷಣಾ ನಿರ್ದೇಶಕರಿಂದ ನೇಮಿಸಲ್ಪಡುವ ಒಬ್ಬ ಅಧಿಕಾರಿ;

ಒ. ಭಾರತೀಯ ವನ್ಯಜೀವಿ ಸಂಸ್ಥೆ, ಡೆಹ್ರಾಡೂನ್‌ನಿಂದ ಒಬ್ಬ ಪ್ರತಿನಿಧಿ;

ಪಿ. ಭಾರತೀಯ ಸಸ್ಯವಿಜ್ಞಾನ ಸರ್ವೇಕ್ಷಣಾ ಸಂಸ್ಥೆಯಿಂದ ಒಬ್ಬ ಪ್ರತಿನಿಧಿ;

ಕ್ಯೂ. ಭಾರತೀಯ ಪ್ರಾಣಿವಿಜ್ಞಾನ ಸರ್ವೇಕ್ಷಣಾ ಸಂಸ್ಥೆಯಿಂದ ಒಬ್ಬ ಪ್ರತಿನಿಧಿ;

ಆರ್. ಮುಖ್ಯ ವನ್ಯಜೀವಿ ಪರಿಪಾಲಕರು, ಸದಸ್ಯ-ಕಾರ್ಯದರ್ಶಿಗಳಾಗಿರತಕ್ಕದ್ದು.

2. ಕಚೇರಿಯ ಪದನಿಮಿತ್ತ ಸದಸ್ಯರನ್ನು ಹೊರತು ಪಡಿಸಿ ಸದಸ್ಯರ ಸೇವಾವಧಿ, ಉಪ ಕಲಂ (1) ರ ಖಂಡ ಲ ಮತ್ತು (ಇ) ಯಲ್ಲಿ ಉಲ್ಲೇಖಿಸಿರುವ ಹುದ್ದೆಗಳ ಭರ್ತಿಯ ವಿಧಾನ ಮತ್ತು ರಾಷ್ಟ್ರೀಯ ಮಂಡಳಿಯ ಸದಸ್ಯರು ತಮ್ಮ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನವು ನಿಗದಿತಗೊಳಿಸಿದಂತೆಯೇ ಇರತಕ್ಕದ್ದು.

(3). ಸದಸ್ಯರು (ಪದನಿಮಿತ್ತ ಸದಸ್ಯರ ಹೊರತಾಗಿ) ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಾಗ ಒದಗಿದ ವೆಚ್ಚಗಳಿಗೆ ಭತ್ಯೆಯನ್ನು ನಿಗದಿಪಡಿಸಿದಂತೆ ಪಡೆಯಲು ಅರ್ಹರಾಗಿರುತ್ತಾರೆ.

## ತೀರ್ಮಾನವಾದ ಮೊಕದ್ದಮೆ (ಕೇಸ್ ಲಾ)

<u>ಸ್ವಯಂ ಪ್ರೇರಿತ ಪರಿಗಣನೆ ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು, 2012 (5) ಕೆಎಆರ್.ಎಲ್.ಜೆ 313 (ಡಿಬಿ)</u>

**ಕಲಂ 6(1) ಮತ್ತು (38)**– ವನ್ಯಜೀವಿ (ಸಂರಕ್ಷಣೆ) (ತಿದ್ದುಪಡಿ) ಕಾಯ್ದೆ 2002ರಲ್ಲಿ ತಿದ್ದುಪಡಿ ಮಾಡಿದಂತೆ– ಅನುಚ್ಛೇದ 226, ಭಾರತದ ಸಂವಿಧಾನ – ಸಾರ್ವಜನಿಕ ಹಿತಾಸಕ್ತಿ ಅರ್ಜಿ – ಮೈಸೂರು ಅರಣ್ಯ ಪ್ರದೇಶದಲ್ಲಿ ನಾಲ್ಕು ಆನೆಗಳ ಸಾವಿಗೆ ಸಂಬಂಧಿಸಿದಂತೆ, ಮುಖ್ಯ ನ್ಯಾಯಮೂರ್ತಿಯವರ ನಿರ್ದೇಶನದ ಮೇಲೆ ಸ್ವಯಂಪ್ರೇರಿತ ಪರಿಗಣನೆಯ ರಿಟ್ ಅರ್ಜಿಯನ್ನು ದಾಖಲಿಸಲಾಯಿತು – 11–3–2009 ರಂದು ಅಡ್ವೋಕೇಟ್ ಜನರಲ್‌ರವರು, ಆನೆ ಆವಾಸಸ್ಥಾನದಲ್ಲಿ ಮಾನವ–ಆನೆಗಳ ಸಂಘರ್ಷದ ವಿವರಣೆ ಮತ್ತು ಆನೆಗಳ ರಕ್ಷಣೆಯ ಅವಶ್ಯಕತೆಗಳು ಮತ್ತು ಶಿಫಾರಸ್ಸುಗಳು ಎಂಬ ಕ್ರಿಯಾಯೋಜನೆಯನ್ನು ಸಲ್ಲಿಸಿದರು – ವರದಿಯು ಕಲಂ 6(1) ವನ್ಯಜೀವಿ (ಸಂರಕ್ಷಣೆ) (ತಿದ್ದುಪಡಿ) ಕಾಯ್ದೆ 2002 ಅಡಿಯಲ್ಲಿ ರಾಜ್ಯ ಮಂಡಳಿಯ ರಚನೆಯೊಂದಿಗೆ 2–3–2009 ರಲ್ಲಿ ಸರ್ಕಾರದ ಅಧಿಸೂಚನೆಯನ್ನು ಉದ್ಧರಿಸಿತು – ಹೆಚ್ಚುವರಿ ಸದಸ್ಯರನ್ನು ನೇಮಿಸಲಾಯಿತು ಮತ್ತು ನಿರ್ದೇಶನಗಳನ್ನು ನೀಡಲಾಯಿತು.

ಪಿ ಡಿ ದಿನಕರನ್, ಪ್ರನ್ಯಾ. ಮತ್ತು ವಿ ಜಿ ಸಭಾಹಿತ್, ನ್ಯಾ. ಅವರ ತೀರ್ಮ: ದಿನಾಂಕ 11–3–2009ರ ವರದಿ ಮತ್ತು ಆನೆ ಆವಾಸಸ್ಥಾದ ಕ್ರಿಯಾಯೋಜನೆ 12–3–2009ರಂದು ಸಲ್ಲಿಸಲಾಯಿತು; ರಾಜ್ಯವು ಪ್ರಸ್ತಾಪಿಸಿದ ಆನೆಗಳ ಮತ್ತು ಇತರ ವನ್ಯಜೀವಿಗಳ ಸಂರಕ್ಷಣೆಯ ದಿನಾಂಕ 11–3–2009ರ ಸಮಗ್ರ ಕ್ರಿಯಾ ಯೋಜನೆಯನ್ನು 17–4–2009ರಂದು ಸಲ್ಲಿಸಲಾಯಿತು; ಮತ್ತು ಡಾ॥ ಸಿ.ಎಚ್.ಬಸಪ್ಪನವರ್, ನಿವೃತ್ತ ಅರಣ್ಯಾಧಿಕಾರಿ ಮತ್ತು ವನ್ಯಜೀವಿ ತಜ್ಞರು ಸಲ್ಲಿಸಿದ "ಮಾನವ ಮತ್ತು ಆನೆ ಸಂಘರ್ಷದ ಉಪಶಮನ" (ವೈಜ್ಞಾನಿಕ ವರದಿ)ದ ಮೇಲೆ ಸಮಗ್ರ ಕ್ರಿಯಾ ಯೋಜನೆಯನ್ನು 17–4–2009ರಂದು ದಾಖಲೆಗೆ ತೆಗೆದುಕೊಳ್ಳಲಾಯಿತು. ಕ್ರಿಯಾ ಯೋಜನೆಯ ಪ್ಯಾರ 8.7.1, 8.7.2 ರಲ್ಲಿ ಹೇಳಿದ ಮತ್ತು 32.2 (ಮೇಲೆ ಹೇಳಿದಂತೆ) ವಿಶೇಷವಾಗಿ ಪ್ರಸ್ತಾಪಿಸಿದ ಅಲ್ಪಾವಧಿ ಕ್ರಮಗಳನ್ನು ರಾಜ್ಯ ಸರ್ಕಾರವು ಅಳವಡಿಸಿಕೊಳ್ಳತಕ್ಕದ್ದು ಮತ್ತು ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸಿಬ್ಬಂದಿ ಮತ್ತು ಸಂಚಾರಿ ದಳಗಳ ಆಯ್ಕೆ ಹಾಗೂ ನೇಮಕಾತಿಯನ್ನು ಈ ಆದೇಶ ಸ್ವೀಕರಿಸಿದ ಮೂರು ತಿಂಗಳೊಳಗೆ ರಾಜ್ಯ ಸರ್ಕಾರವು ಕಾರ್ಯಗತಗೊಳಿಸತಕ್ಕದ್ದು. ಕ್ರಿಯಾಯೋಜನೆಯ ಪ್ಯಾರ 8.7.3 ರಲ್ಲಿ ಹೇಳಿದ ಮತ್ತು 32.3 (ಮೇಲೆ ಹೇಳಿದಂತೆ)